# ಗ್ರಂಥಸರಸ್ವತಿ ಪ್ರತಿಭಾರಂಗ

# **560/21, ಸಂಜೀವಿನಿ ಆಂಜನೇಯ ದೇವಾಲಯದ ರಸ್ತೆ, 2ನೆಯಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ–577005.**

shivukurki1@gmail.com ಮೊ: 8970948221 web: kannadaprapancha.in


=====================================================================

## S.S.L.C - P.U.C **ತರಗತಿಗಳ STATE - CBSC ವಿದ್ಯಾರ್ಥಿಗಳಿಗಾಗಿ ಕನ್ನಡ–ಗಣಿತ–ವಿಜ್ಞಾನ ವಿಷಯಗಳಲ್ಲಿ 85% ಗಿಂತ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ**

# "ಗ್ರಂಥಸರಸ್ವತಿ ಪ್ರತಿಭಾ ಪುರಸ್ಕಾರ–೨೦೧೭ "

### * * * * * ಮಾಹಿತಿ ಪತ್ರ * * * * *

ದಾವಣಗೆರೆಯ ಗ್ರಂಥಸರಸ್ವತಿ ಪ್ರತಿಭಾರಂಗವು **ಎಸ್.ಎಸ್.ಎಲ್.ಸಿ. ಕನ್ನಡ, ಗಣಿತ** ಹಾಗು **ವಿಜ್ಞಾನ** ಮತ್ತು ಪಿ.ಯು.ಸಿ ಪರೀಕ್ಷೆಯ **ಕನ್ನಡ, ಗಣಿತ** ಹಾಗು **ಭೌತಶಾಸ್ತ್ರ** ವಿಷಯದಲ್ಲಿ **ಶೇಕಡ** 85 ಕ್ಕೂ ಹೆಚ್ಚು **ರಾಜ್ಯಮಟ್ಟದ** ಕನ್ನಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡುವ

| **ಕನ್ನಡ ನುಡಿಜಾಣ ಪಂಪ ಪ್ರಶಸ್ತಿ** | **ವಿಜ್ಞಾನ ಪಂಡಿತ ಸರ್.ಸಿ.ವಿ.ರಾಮನ್ ಪ್ರಶಸ್ತಿ** | **ಗಣಿತ ಸರಸ್ವತಿ ಆರ್ಯಭಟ ಪ್ರಶಸ್ತಿ** |
|---|---|---|

ಈ ಪ್ರಶಸ್ತಿ ವಿತರಣಾ ಸಮಾರಂಭದ ಸಂಗಡ ಎಲ್ಲೆಡೆ ಕನ್ನಡ ಕಸ್ತೂರಿಯ ಕಂಪುಸೂಸುವ **"ಕನ್ನಡಕಬ್ಬ ಉಗಾದಿಹಬ್ಬ"** ಎಂಬ ವರ್ಷಂಪೂರ್ತಿ ಕಾವ್ಯ ಚಿಂತನಧಾರೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮವನ್ನು ಪೋಷಕರ ಹಾಗೂ ಶಿಕ್ಷಕರ ಒತ್ತಾಸೆ ಮೇರೆಗೆ ಮೊದಲ ಬಾರಿಗೆ ಆಯಾ ಜಿಲ್ಲೆಗಳಲ್ಲಿ ಆಯೋಜಿಸಲಾಗಿದೆ. ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಪ್ರಶಸ್ತಿ ವಿತರಣಾ ಸಮಾರಂಭಕ್ಕೆ ಬಂದು ಹೋಗಲು ಅವರ ಕಾಲ–ಕಾಸು–ಕಾಯಕಗಳಿಗೆ ಅನಾನುಕೂಲ ಆಗುವುದರಿಂದ ಈ ಬಾರಿ **13** ವಿವಿಧ ಜಿಲ್ಲೆಗಳ ಮಹಾನಗರಗಳಲ್ಲಿ **ಅಕ್ಟೋಬರ್** 8 ರಿಂದ **ಡಿಸೆಂಬರ್ 31** ರವರೆಗೆ ಪ್ರತಿ **ಭಾನುವಾರ** ಬೆಳಗ್ಗೆ 10.30ಕ್ಕೆ ನಡೆಯಲಿವೆ.

ಅಕ್ಟೋಬರ್ **8** ರಂದು ದಾವಣಗೆರೆಯಲ್ಲಿ ಈ ಪ್ರಶಸ್ತಿ ವಿತರಣೆ ಹಾಗೂ ಕನ್ನಡಕಬ್ಬ ಉಗಾದಿಹಬ್ಬ ಕಾರ್ಯಯೋಜನೆಯು ಉದ್ಘಾಟನೆಗೊಂಡು **ಅ.15** ಶಿವಮೊಗ್ಗ, **ಅ.22** ಚಿತ್ರದುರ್ಗ **ಅ.29** ಹಾವೇರಿ, **ನ.5** ಗದಗ, **ನ.12** ಧಾರವಾಡ, **ನ.19** ಬಳ್ಳಾರಿ, **ನ.26** ಚಿಕ್ಕಮಗಳೂರು, **ಡಿ.3** ಉಡುಪಿ, **ಡಿ.10** ಹಾಸನ **ಡಿ.17** ತುಮಕೂರು **ಡಿ.24** ಮೈಸೂರು ಮತ್ತು **ಡಿ.31** ರಂದು ಬೆಂಗಳೂರು ಮಹಾನಗರದಲ್ಲಿ ಸಮಾರೋಪ ಸಮಾರಂಭ ಜರುಗುವ ಮೂಲಕ ಮುಕ್ತಾಯಗೊಳ್ಳಲಿದೆ.

**ಎಸ್.ಎಸ್.ಎಲ್.ಸಿ.** ಕನ್ನಡ ವಿಷಯದಲ್ಲಿ ಪ್ರಥಮ ಭಾಷೆ **110,** ದ್ವಿತಿಯಭಾಷೆ **85,** ತೃತಿಯಭಾಷೆ **85, ಸಿ.ಬಿ.ಎಸ್.ಸಿ.** 09 ಅಂಕ ಮತ್ತು **ಪಿ.ಯು.ಸಿ ಯಲ್ಲಿ ಕನ್ನಡ–ಗಣಿತ–ಭೌತಶಾಸ್ತ್ರ** ವಿಷಯದಲ್ಲಿ **ತಲಾ 85 ಅಂಕ** ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಈ ಮೇಲಿನ ಮೂರುಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಲಾಗುವುದು. ಇವರೆಲ್ಲರಿಗೂ **ಆಕರ್ಷಕ ಸ್ಮರಣಿಕೆ, ಕನ್ನಡಶಾಲು, ಬಂಗಾರವರ್ಣದ ಪದಕ ಹಾಗೂ ವಿಶೇಷ ಪ್ರಶಸ್ತಿಪತ್ರ** ನೀಡಿ ಪುರಸ್ಕರಿಸಲಾಗುವುದು. ಈ ವರ್ಣಮಯ ಸಮಾರಂಭಗಳಲ್ಲಿ ನಾಡಿನ **ಪೂಜ್ಯನೀಯ ಸ್ವಾಮಿಗಳು, ಸುಪ್ರಸಿದ್ಧ ಸಾಹಿತಿಗಳು, ವಿಶಿಷ್ಟ ಸಾಧಕರು** ಹಾಗೂ **ಗಣ್ಯ ಅತಿಥಿಗಳು** ಉಪಸ್ಥಿತರಿದ್ದು ಶುಭಹಾರೈಸುವರು.

ಆಸಕ್ತರು ನಿಗದಿತ ಅರ್ಜಿ ನಮೂನೆ ಪಡೆಯಲು ನಮ್ಮ ವೆಬ್ ಸೈಟ್ **web: kannadaprapancha.in** ಇಲ್ಲಿಗೆ ಸಂಪರ್ಕಿಸಿರಿ. ನಮ್ಮ **ಮೊಬೈಲ್ ಸಂಖ್ಯೆ : 8970948221** ಸಂಪರ್ಕಿಸಿ **whatsapp, hike, facebook** ಸಂಪರ್ಕಿಸಿ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದು. ಒಬ್ಬರೇ ಅಭ್ಯರ್ಥಿ ಮೂರೂ ವಿಷಯ (ಪ್ರಶಸ್ತಿ) ಗಳಿಗೂ ಒಂದೇ ಅರ್ಜಿಯನ್ನು ಹಾಕಬಹುದು. **ಒಂದು ವಿಷಯಕ್ಕೆ 300ರೂ., ಎರಡು ವಿಷಯಗಳಿಗೆ 400ರೂ.,** ಹಾಗೂ **ಮೂರೂ ವಿಷಯಗಳಿಗೆ 500 ರೂ. ಪ್ರವೇಶ ಧನವನ್ನು "ಗ್ರಂಥಸರಸ್ವತಿ ಪ್ರತಿಭಾರಂಗ, ದಾವಣಗೆರೆ "** ಈ ಹೆಸರಿಗೆ **ಡಿ.ಡಿ.** ತೆಗೆದು ಅರ್ಜಿ ಹಾಗೂ ಅಂಕಪಟ್ಟಿಯೊಂದಿಗೆ ಈ ಮೇಲಿನ ನಮ್ಮ ವಿಳಾಸಕ್ಕೆ ಕಳುಹಿಸಬೇಕು. ಆಸಕ್ತ ಅರ್ಹ ಪ್ರತಿಭಾವಂತ ವಿದ್ಯಾವಂತರು ಈ ಸದಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬಹುದು. **ಆಗಸ್ಟ್ 31 ಅರ್ಜಿ ಹಾಕಲು ಕೊನೆಯ ದಿನ.**

ವಂದನೆಗಳೊಂದಿಗೆ

**– ಆರ್. ಶಿವಕುಮಾರಸ್ವಾಮಿ ಕುರ್ಕಿ**

ಅಧ್ಯಕ್ಷರು, ಗ್ರಂಥಸರಸ್ವತಿ ಪ್ರತಿಭಾರಂಗ, ದಾವಣಗೆರೆ